## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

ಸಿ.ಸಿ ನಂಃ 66/2020

ಸಿಡಬ್ಲ್ಯೂಃ 3 ಪಿಡಬ್ಲ್ಯೂಃ 3

ಹೆಸರುಃ ತೆರೆಸಬಾಬು

ತಂದೆ/ಗಂಡನ ಹೆಸರುಃ ವೆಲಬಾಳುದು ಅಗ್ನಿಪರ್ತಿ

ವಯಸ್ಸುಃ 50 ವರ್ಷ

ಉದ್ಯೋಗಃ ಕ್ಯಾಥೋಲಿಕ ಪ್ರಿಸ್ಟ

ವಾಸಃ ತೋಟಗುಡಿಂ , ಪೇಡಪತಿ ತಾಲೂಕು, ಆಂಧ್ರಪ್ರದೇಶ

ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 25-03-2025 ರಂದು ಬೋಧಿಸಲಾಯಿತು.

**(ಕಲಂ 299 ರ ಅಡಿಯಲ್ಲಿ ಸಾಕ್ಷಿಯ ಹೇಳಿಕೆ)**

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ**

ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇರುವುದಿಲ್ಲಾ , ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಪೋಲೀಸರು ತಯಾರಿಸಿರುವುದಿಲ್ಲಾ , ಯಾವುದೇ ವಸ್ತುಗಳನ್ನು ಜಪ್ತು ಮಾಡಿರುವುದಿಲ್ಲಾ. ಸಾಕ್ಷಿಗೆ ಜಪ್ತು ಪಂಚನಾಮೆಯನ್ನು ತೋರಿಸಲಾಗಿ , ಸಾಕ್ಷಿಯು ಅದರಲ್ಲಿರುವ ಸಹಿಯನ್ನು ಗುರುತಿಸಿದ್ದರಿಂದ ಜಪ್ತು ಪಂಚನಾಮೆಯನ್ನು ನಿಪಿ.5 ಎಂದು , ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು. ನಿಪಿ.5 ರಲ್ಲಿ ಏನು ಬರೆದಿರುತ್ತದೆ ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲಾ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಹಾಗೂ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷ್ಯ ನುಡಿರುವುದರಿಂದ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಎ.ಪಿ.ಪಿ ರವರಿಂದಃ**

ದಿನಾಂಕಃ 23.02.2008 ರಂದು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೋಲೀಸರು ಎಸ್ ಬಿ ಐ ಸದಾಶಿವಗಡ ಶಾಖೆಯಲ್ಲಿ ನನ್ನ ಹಾಗೂ ಚಾಸಾ.2 ರವರ ಸಮಕ್ಷಮ ಚಾಸಾ.1 ರವರು ನೀಡಿದ ಮಾಹಿತಿಯಂತೆ ಚಾಸಾ.6 ರವರು ನೀಡಿದ ಚೆಕ್ ನ್ನು ಹಾಜರು ಪಡಿಸಿದ್ದು , ಅದನ್ನು ಈ ಪಂಚನಾಮೆಯ ಮೂಲಕ ಜಪ್ತು

ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಪೋಲೀಸರು ಬೆಳಿಗ್ಗೆ 10.00 ರಿಂದ 11.00 ರ ವರೆಗೆ ಎಸ್ ಬಿ ಐ ಸದಾಶಿವಗಡ ಶಾಖೆಯಲ್ಲಿ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ.5 ನ್ನು ಸಂಪೂಣರ್ವಾಗಿ ಓದಿ ಹೇಳಲಾಗಿ ಸಾಕ್ಷಿಯು ಅದನ್ನು ನಿರಾಕರಿಸಿರುತ್ತಾರೆ. ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ ಸರಿ ಇದೆ.**

**ಪ್ರ.ದ.ನ್ಯಾದಂ. ಕಾರವಾರ**